| | | | |
|---|---|---|---|
| | | ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಪಕೃತಿ ವಿಕೋಪದಡಿಯಲ್ಲಿ ಹಾನಿಗೊಳಗಾಗುವ ಕುಟುಂಬ/ವ್ಯಕ್ತಿಗಳನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಸಮಯದಲ್ಲಿ ತಕ್ಷಣಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಅಲ್ಪ ಮಟ್ಟದಲ್ಲಿ ಧನ ಸಹಾಯ ನೀಡುವುದು ಅಗತ್ಯವಾಗಿರುತ್ತದೆ. ಆದ್ದರಿಂದ, ವಂತಿಕೆ ನೀಡಲು ನಿಗದಿಪಡಿಸಿರುವ ಅನುದಾನದಲ್ಲಿ ಸ್ವಲ್ಪ ಅನುದಾನವನ್ನು ಪೃಕೃತಿ ವಿಕೋಪದಡಿ ಹಾನಿಗೊಳಗಾಗುವ ಕುಟುಂಬ/ ವ್ಯಕ್ತಿಗಳಿಗೆ ನೀಡಲು ನಿಗದಿಪಡಿಸುವುದು ಸೂಕ್ತವಾಗಿರುತ್ತದೆ. ಅಲ್ಲದೆ, ವಂತಿಕೆ ನೀಡಲು ನಿಗದಿಪಡಿಸಿರುವ ಅನುದಾನವನ್ನು ಅವಕಾಶವಿದ್ದಲ್ಲಿ, ಹೆಚ್ಚು ಮಾಡಲು ಕೂಡ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಲೆಕ್ಕ ಅಧೀಕ್ಷಕರು ಮಾತನಾಡುತ್ತಾ, ವಂತಿಕೆ ನೀಡಲು ನಿಗದಿಪಡಿಸಿರುವ ಅನುದಾನವನ್ನು ವಾರ್ಷಿಕವಾಗಿ ಶೇ.20ರಷ್ಟು ಅನುದಾನವನ್ನು ಹೆಚ್ಚುಮಾಡಲು ಅವಕಾಶವಿರುತ್ತದೆ ಎಂದು ಅಭಿಪ್ರಾಯಪಟ್ಟರು. | ಪಂದ್ಯಾವಳಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು. |
| 4 | ಮಾಧ್ಯಮ ದಿನಾಚರಣೆಗೆ ನೆರವು | ಅಧ್ಯಕ್ಷರು , ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಇದೇ ಜುಲೈ 22ರಂದು ಬಾನುವಾರ ಚನ್ನರಾಯಪಟ್ಟಣ ಸಮೀಪದ ಬೆಲಸಿಂದ ವನದಲ್ಲಿ ಜಿಲ್ಲಾ ಮಟ್ಟದ ಮಾಧ್ಯಮ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಪಂಚಾಯಿತಿ ವತಿಯಿಂದ ರೂ.25000/-ಗಳ ಆರ್ಥಿಕ ಸಹಾಯವನ್ನು ಮಾಡಬೇಕೆಂದು ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಮನವಿಯನ್ನು ಕೊಟ್ಟಿರುತ್ತಾರೆ. ಮಾನ್ಯ ಅಧ್ಯಕ್ಷರು ರೂ.10000/-ಗಳ ಧನ ಸಹಾಯವನ್ನು ನೀಡುವಂತೆ ಸೂಚಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಜಿಲ್ಲಾ ಪತ್ರಕರ್ತರ ಸಂಘ, ಹಾಸನ ಇವರು ಕೋರಿರುವಂತೆ, ದಿನಾಂಕ: 22-07-2012ರಂದು ನಡೆಯುವ ಮಾಧ್ಯಮ ದಿನಾಚರಣೆಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನ ಸಹಾಯವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | ಮತ್ತಾವುದೇ ವಿಷಯ ಚರ್ಚೆಗೆ ಬಾರದ ಹಿನ್ನಲೆಯಲ್ಲಿ ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು. | |

(ಬಿ.ಆರ್.ಸತ್ಯನಾರಾಯಣ)
ಅಧ್ಯಕ್ಷರು,
ಜಿಲ್ಲಾ ಪಂಚಾಯಿತಿ, ಹಾಸನ.

| | | | |
|---|---|---|---|
| | | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಉಪ ನಿರ್ದೇಶಕರು, ಪಶುಪಾಲನಾ ಇಲಾಖೆರವರಿಗೆ ತಿಳಿಸಿದರು.<br>**<u>ಮೀನುಗಾರಿಕೆ ಇಲಾಖೆ:</u>**<br>ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣಗೌಡರವರು ಮಾತನಾಡುತ್ತಾ, ಮೀನುಗಾರಿಕೆ ಇಲಾಖೆಯಡಿ ಮಂಜೂರಾಗುವ ಮನೆಗಳ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಗಮನಕ್ಕೆ ತರಬೇಕೆಂದು ಕೋರಿದರು.<br>**<u>ಸಾಮಾಜಿಕ ಅರಣ್ಯ ಇಲಾಖೆ:</u>**<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹೆಬ್ಬೇವು ಮರಗಳನ್ನು ಬೆಳೆದಲ್ಲಿ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದನ್ನು ಗಮನಿಸಲಾಗಿದೆ. ಆದ್ದರಿಂದ, ಹೆಬ್ಬೇವು ಮರಗಳನ್ನು ಬೆಳೆಯುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿದಲ್ಲಿ ರೈತರು ಹೆಬ್ಬೇವನ್ನು ಬೆಳೆಯಲು ಅನುಕೂಲವಾಗುತ್ತದೆ. ಈ ಬಗ್ಗೆ ಕ್ರಮ ವಹಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ತಿಳಿಸಿದರು.<br>**<u>ಕೈಗಾರಿಕೆ ಇಲಾಖೆ:</u>**<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೈಗಾರಿಕೆ ಇಲಾಖೆಯ ವತಿಯಿಂದ ನೀಡುವ ತರಬೇತಿ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸ್ಥಳೀಯವಾಗಿ ಬೆಳೆಯುವ ಟಮೊಟೊ, ಆಲೂಗೆಡ್ಡೆ, ಹಸಿಮೆಣಸಿನಕಾಯಿ ಇವೇ ಮೊದಲಾದವುಗಳಿಂದ ಉತ್ತಮ ರೀತಿಯ ಸಾಸ್ ಗಳನ್ನು ಮಾಡುವ ಬಗ್ಗೆ ತರಬೇತಿಯನ್ನು ನೀಡಿದಲ್ಲಿ ಬೆಲೆ ಕಡಿಮೆಯಾದ ಸಮಯದಲ್ಲಿ ಸಾಸ್ ಗಳನ್ನು [illegible] ಮಾರಾಟ ಮಾಡಲು ಅನುಕೂಲವಾಗುತ್ತದೆ ಈ ಬಗ್ಗೆ ಕ್ರಮ ವಹಿಸಬೇಕೆಂದು ತಿಳಿಸಿದರು. | |
| 2 | 2012-13ನೇ ಸಾಲಿನಲ್ಲಿ ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳಲ್ಲಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದ ವಿವರ | ಲೆಕ್ಕ ಅಧೀಕ್ಷಕರು , 2012-13ನೇ ಸಾಲಿನಲ್ಲಿ ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳಲ್ಲಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಸಭೆಯ ಅವಗಾಹನೆಗೆ ಮಂಡಿಸಿದರು. | ಸಭೆಯು 2012-13ನೇ ಸಾಲಿನಲ್ಲಿ ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳಲ್ಲಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಸಭೆಯು ಅವಗಾಹಿಸಿತು. |
| 3 | ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಧನಸಹಾಯ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅ(8)/3/2011-12 ದಿನಾಂಕ: 17-04-2012 ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮಹಾರಾಜ ಪಾರ್ಕ್ ವಾಲಿಬಾಲ್ ಕ್ಲಬ್ (ರಿ), ಹಾಸನ ಇವರ ವತಿಯಿಂದ ದಿನಾಂಕ: 14-04-2012 ರಂದು ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗಳನ್ನು ಹಾಸನ ನಗರದ ಮಹಾರಾಜ ಪಾರ್ಕಿನಲ್ಲಿ ಆಯೋಜಿಸಲಾಗಿದ್ದು, ಈ ಪಂದ್ಯಾವಳಿಗೆ ರಾಜ್ಯದ ನಾನಾ ಕಡೆಗಳಿಂದ ಖ್ಯಾತ ತಂಡಗಳು ಆಗಮಿಸುತ್ತಿದ್ದು, ಸದರಿ ಪಂದ್ಯಾವಳಿಯ ವೆಚ್ಚ ಭರಿಸಲು ಜಿಲ್ಲಾ ಪಂಚಾಯಿತಿಯಿಂದ ಧನ ಸಹಾಯ ನೀಡುವಂತೆ ಕೋರಿ ಅಧ್ಯಕ್ಷರು, ಮಹಾರಾಜ ಪಾರ್ಕ್ ವಾಲಿಬಾಲ್ ಕ್ಲಬ್ (ರಿ) ಹಾಸನ ಇವರು ಮನವಿ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಮಹಾರಾಜ ಪಾರ್ಕ್ ವಾಲಿಬಾಲ್ ಕ್ಲಬ್ (ರಿ), ಹಾಸನ ಇವರ ವತಿಯಿಂದ ದಿನಾಂಕ: 14-04-2012 ರಂದು ನಡೆಸಲಾಗಿರುವ ರಾಜ್ಯ ಮಟ್ಟದ ವಾಲಿಬಾಲ್ |

ಮುಂದುವರೆದು, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ಇವರು ಸಭೆಗೆ ಹಾಜರಿಲ್ಲದಿರುವ ಬಗ್ಗೆ ಕಾರಣ ಕೇಳಿ ನೋಟೀಸನ್ನು ಜಾರಿ ಮಾಡುವಂತೆ ತಿಳಿಸಿದರು.

**ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ:**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ವಿದ್ಯಾರ್ಥಿನಿಲಯಗಳಲ್ಲಿ ಉಪಯೋಗಿಸುವ ಆಹಾರ ಪದಾರ್ಥಗಳನ್ನು ಸ್ವಚ್ಛಗೊಳಿಸಲು ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿಗೂ ಒಂದು ಸ್ವಚ್ಛಗೊಳಿಸುವ ಯಂತ್ರವನ್ನು ಖರೀದಿಸುವ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯವನ್ನು ಮಾಡುವುದು ಸೂಕ್ತವೆಂದು ಅಭಿಪ್ರಾಯಟ್ಟರು.

ಯೋಜನಾ ನಿರ್ದೇಶಕರು ಮಾತನಾಡುತ್ತಾ, ಸ್ವಚ್ಛ ಗೊಳಿಸುವ ಯಂತ್ರಗಳು ಎಲ್ಲೆಲ್ಲಿಗೆ ಅವಶ್ಯಕತೆಯಿದೆ ಎನ್ನುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ/ ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆರವರಿಗೆ ತಿಳಿಸಿದರು ಮತ್ತು ಎಸ್.ಜಿ.ಎಸ್.ವೈ ಯೋಜನೆಯಡಿ ಸ್ವಸಹಾಯ ಸಂಘಗಳ ವತಿಯಿಂದ ಸಾಂಬಾರ್ ಪೌಡರ್/ ದನಿಯಾಪೌಡರ್ ಇವೇ ಮೊದಲಾದವುಗಳನ್ನು ತಯಾರು ಮಾಡಲಾಗುತ್ತಿದ್ದು, ವಿದ್ಯಾರ್ಥಿನಿಲಯ/ ಸರ್ಕಾರಿ ಶಾಲೆಗಳಿಗೆ ಸ್ವಸಹಾಯ ಸಂಘಗಳ ವತಿಯಿಂದಲೇ ಸಾಂಬಾರ್ ಪೌಡರ್/ ದನಿಯಾಪೌಡರ್ ಇವೇ ಮೊದಲಾದವುಗಳನ್ನು ಖರೀದಿಸುವ ಬಗ್ಗೆ ಸಂಬಂಧಪಟ್ಟವರಿಗೆ ನಿರ್ದೇಶನವನ್ನು ನೀಡಬೇಕೆಂದು ತಿಳಿಸಿದರು.

ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆರವರು ಮಾತನಾಡುತ್ತಾ, ಹಾಸನ ನಗರದಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ನೀರಿನ ಸೌಲಭ್ಯವನ್ನು ಒದಗಿಸಲು ಕೊಳವೆ ಬಾವಿಯನ್ನು ಕೊರೆಸಲಾಗಿತ್ತು. ಆದರೆ ಕೊಳವೆ ಬಾವಿಯು ವಿಫಲವಾಗಿದ್ದು, ನೀರಿನ ಸಮಸ್ಯೆ ಹೆಚ್ಚಾಗಿದೆ. ಈ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಾಸನ ನಗರದಲ್ಲಿರುವ ವಿದ್ಯಾರ್ಥಿನಿಲಯಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

**ತೋಟಗಾರಿಕೆ ಇಲಾಖೆ:**

ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣಗೌಡರವರು ಮಾತನಾಡುತ್ತಾ, ಹನಿ ನೀರಾವರಿ ಯೋಜನೆಗೆ ಯಾವ ಮಾನದಂಡದ ಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂಬ ಬಗ್ಗೆ ವಿವರಗಳನ್ನು ನೀಡಬೇಕೆಂದು ಕೋರಿದರು ಮತ್ತು ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಜಿಲ್ಲಾ ಪಂಚಾಯತ್ ಸದಸ್ಯರ ಗಮನಕ್ಕೆ ತರಬೇಕೆಂದು ಕೋರಿದರು.

**ಪಶುಪಾಲನಾ ಇಲಾಖೆ:**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಆಲೂರು ತಾಲ್ಲೂಕು ಭರತೂರು ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಪಶುಪಾಲನಾ ಇಲಾಖೆಯ ಕಟ್ಟಡಕ್ಕೆ ಹಣ ಪಾವತಿಸುವ ಬಗ್ಗೆ ಗುತ್ತಿಗೆದಾರರು ಮನವಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವಂತೆ

**ಆರೋಗ್ಯ ಇಲಾಖೆ:** ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಡೆಂಗ್ಯೂ ಜ್ವರದ ನಿಯಂತ್ರಣದ ಬಗ್ಗೆ ಏನು ಕ್ರಮ ವಹಿಸಲಾಗಿದೆ ಎಂಬ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ವಿವರ ನೀಡುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಹಾಸನ ನಗರದಲ್ಲಿ ಎಲ್ಲಾ ಮನೆಗಳಿಗೂ ಭೇಟಿ ನೀಡಿ ಸರ್ವೆ ನಡೆಸಿದ್ದು, ಡೆಂಗ್ಯೂ ಪ್ರಕರಣಗಳು ಕಂಡುಬಂದಿರುವುದಿಲ್ಲವೆಂದು ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಡೆಂಗ್ಯೂ ಜ್ವರದ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.ಮುಂದುವರೆದು, ಬೇರೆ ರಾಜ್ಯಗಳಲ್ಲಿ ನಿರ್ಬಂಧಿಸಿರುವ ಔಷಧಿಗಳಿಗೆ ಹಾಸನ ಜಿಲ್ಲೆಯಲ್ಲಿಯೂ ಸಹ ನಿರ್ಬಂಧ ಹೇರುವ ನಿಟ್ಟಿನಲ್ಲಿ ಔಷಧಿಗಳ ಪಟ್ಟಿಯನ್ನು ಪಡೆದು ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ, ಕೆಲವು ಬಿಲ್ಲುಗಳು ವ್ಯತ್ಯಾಸವಾಗಿವೆಯೆಂದು ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ತಿಳಿಸಿರುತ್ತಾರೆ. ಆದ್ದರಿಂದ, ಮುಂದಿನ ಸ್ಥಾಯಿ ಸಮಿತಿ ಸಭೆಗೆ ಬಿಲ್ಲುಗಳಿಗೆ ಸಂಬಂಧಿಸಿದಂತೆ, ವೋಚರ್ ಗಳನ್ನು ಹಾಜರುಪಡಿಸಲು ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**ಸಾರ್ವಜನಿಕ ಶಿಕ್ಷಣ ಇಲಾಖೆ:** ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಪ್ರಸಕ್ತ ಸಾಲಿನಿಂದ ಎಸ್.ಎಸ್.ಎಲ್.ಸಿ ಗೆ ಹೊಸ ಪಠ್ಯಕ್ರಮ ಪ್ರಾರಂಭಿಸಿದ್ದು, ಶಿಕ್ಷಕರುಗಳಿಗೆ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ರವರ ವತಿಯಿಂದ ತರಬೇತಿಯನ್ನು ನೀಡಲಾಗಿದೆ. ಇದೇ ರೀತಿ ಜಿಲ್ಲೆಯ ಎಲ್ಲಾ ಶಿಕ್ಷಕರುಗಳಿಗೆ ಹೊಸ ಪಠ್ಯಕ್ರಮದ ಬಗ್ಗೆ ತರಬೇತಿಯನ್ನು ನೀಡುವುದು ಸೂಕ್ತವಾಗಿರುತ್ತದೆ. ಈ ಬಗ್ಗೆ ಉಪ ನಿರ್ದೇಶಕರು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.

ಮುಂದುವರೆದು, ಶಾಲೆಗಳಿಗೆ ನೀಡುತ್ತಿರುವ ಪೀಠೋಪಕರಣಗಳ ಗುಣಮಟ್ಟವು ಉತ್ತಮವಾಗಿರುವುದಿಲ್ಲವೆಂದು ಅನೇಕ ದೂರುಗಳು ಬಂದಿರುತ್ತವೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ತಿಳಿಸಿದರು.

**ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ:** 2012-13ನೇ ಸಾಲಿಗೆ ಅಂಗವಿಕಲರಿಗೆ ಕ್ರೀಡಾ ಪ್ರೋತ್ಸಾಹಕ್ಕಾಗಿ ರೂ.75000/-ಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಯವರು ವಿವರ ನೀಡಿದರು.

**ಕುಡಿಯುವ ನೀರಿನ ಯೋಜನೆ:** ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಾಸನ ತಾ: ದೇವೇಗೌಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಆದ್ದರಿಂದ, ಬಹುಗ್ರಾಮ ಯೋಜನೆಯಡಿ ಯಗಚಿ ನದಿಯಿಂದ ಕುಡಿಯುವ ನೀರನ್ನು ಒದಗಿಸಲು ಕ್ರಮ ವಹಿಸಬೇಕೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಿದರು.

# ದಿನಾಂಕ: 02-07-2012ರಂದು ಮಧ್ಯಾಹ್ನ: 12-05ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

## ಅಧ್ಯಕ್ಷತೆ: ಶ್ರೀ ಬಿ.ಆರ್.ಸತ್ಯನಾರಾಯಣ

## ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

ಹಾಜರಿ:05 ಗೈರು ಹಾಜರಿ: 02

<table>
<tr><th>ಕ್ರ ಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td colspan="3">ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು.</td></tr>
<tr><td>1</td><td>ಫೆಬ್ರವರಿ 2012 ಮತ್ತು ಮಾರ್ಚ್ 2012ರ ವರೆಗಿನ ಮಾಹೆಯ ಮಾಸಿಕ ಲೆಕ್ಕ ಅನುಮೋದನೆಗೆ</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ ಸಂಕಲನ/ ಮಾಸಿಕ ಲೆಕ್ಕ/2012-13 ದಿನಾಂಕ: 25-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಲೆಕ್ಕ ಅಧೀಕ್ಷಕರು ಪ್ರಸ್ತಾಪಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಸನದ ಫೆಬ್ರವರಿ 2012 ಮತ್ತು ಮಾರ್ಚ್2012 ರ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್ ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆವಾರು ಸಂಕಲನ ಗಣಕೀಕರಣದಲ್ಲಿ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯ ವಿವರ ರಾಜಸ್ವ ಜಮೆ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರ ಕೆಳಗಿನಂತಿದೆ. ಫೆಬ್ರವರಿ 2012 ಮತ್ತು ಮಾರ್ಚ್ 2012ರ ವರೆಗಿನ ಮಾಸಿಕ ಲೆಕ್ಕ ವಿವರ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅನುಮೋದನೆ ನೀಡಲು ಮಂಡಿಸಿದೆ.
<table>
<tr><th>ತಿಂಗಳು</th><th>ಜಮೆ</th><th>ಖರ್ಚು</th></tr>
<tr><td>ಫೆಬ್ರವರಿ 2012</td><td>4,16,69,713</td><td>7,97,83,182</td></tr>
<tr><td>ಮಾರ್ಚ್ 2012</td><td>19,39,09,287</td><td>41,80,22,015</td></tr>
</table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಪಂಚಾಯಿತಿ ಹಾಸನದ ಫೆಬ್ರವರಿ 2012 ಮತ್ತು ಮಾರ್ಚ್ 2012ರ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆ ರಾಜಸ್ವ ಜಮೆ ವೆಚ್ಚಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.
<table>
<tr><th>ತಿಂಗಳು</th><th>ಜಮೆ</th><th>ಖರ್ಚು</th></tr>
<tr><td>ಫೆಬ್ರವರಿ -12</td><td>4,16,69,713</td><td>7,97,83,182</td></tr>
<tr><td>ಮಾರ್ಚ್ -12</td><td>19,39,09,287</td><td>41,80,22,015</td></tr>
</table></td></tr>
</table>

5. ಶ್ರೀಮತಿ ಸಿ.ಎನ್.ರತ್ನಮ್ಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
6. ಶ್ರೀಮತಿ ಡಿ.ಜಿ.ಅಂಬಿಕಾ ರಾಮಣ್ಣ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
7. ಶ್ರೀ ಎನ್.ಡಿ.ಕಿಶೋರ್, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
9. ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತಶಾಖೆಗೆ ಮಾಹಿತಿಗಾಗಿ
10. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
11. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನರವರ ಆಪ್ತಶಾಖೆಗೆ
12. ಉಪ ಕಾರ್ಯದರ್ಶಿ(ಆಡಳಿತ), ಜಿಲಾ ಪಂಚಾಯಿತಿ, ಹಾಸನ.
13. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
16. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
17. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
18. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಳುಹಿಸುತ್ತಾ, ಪೂರ್ಣ ಮಾಹಿತಿಯೊಂದಿಗೆ ಇಲಾಖಾ ಮುಖ್ಯಸ್ಥರು ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.
19. ಉಪನಿರ್ದೇಶಕರು, ಮೂಲಭೂತ ಸೌಕರ್ಯಗಳ ಇಲಾಖೆ (ಭೂಸೇನಾ ನಿಗಮ), ಹಾಸನ.
20. ಕಛೇರಿ ಪ್ರತಿ.

(1)

# ಜಿಲ್ಲಾ ಪಂಚಾಯತ್, ಹಾಸನ.

ಸಂಖ್ಯೆ: ಜಿಪಂಹಾ/ಪ.ಶಾ/ 12 /2012-13

ದಿನಾಂಕ: 23-06-2012

## ಸಭಾಹ್ವಾನ ಪತ್ರ

ಶ್ರೀ ಬಿ.ಆರ್.ಸತ್ಯನಾರಾಯಣ, ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ **ದಿನಾಂಕ: 02-07-2012ರಂದು ಸೋಮವಾರ ಅಪರಾಹ್ನ: 12-05ಗಂಟೆಗೆ** ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯನ್ನು ಹಾಸನ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ. ಸದರಿ ಸಭೆಗೆ ಮಾನ್ಯ ಸದಸ್ಯರುಗಳು ಹಾಜರಾಗಿ ಸಲಹೆ ಸಹಕಾರ ನೀಡಲು ಕೋರಲಾಗಿದೆ.

ಯೋಜನಾ ನಿರ್ದೇಶಕರು,
ಡಿ.ಆರ್.ಡಿ.ಎ ಕೋಶ, ಹಾಗೂ ಸದಸ್ಯ ಕಾರ್ಯದರ್ಶಿ
ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಫೆಬ್ರವರಿ 2012 ಮತ್ತು ಮಾರ್ಚ್ 2012ರವರೆಗಿನ ಮಾಹೆಯ ಮಾಸಿಕ ಲೆಕ್ಕಗಳ ಅನುಮೋದನೆ ಬಗ್ಗೆ.
2. ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಧನಸಹಾಯ ನೀಡುವ ಬಗ್ಗೆ.
3. 2012-13ನೇ ಸಾಲಿನಲ್ಲಿ ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳಲ್ಲಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದ ವಿವರ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀ ಬಿ.ಆರ್.ಸತ್ಯನಾರಾಯಣ, ಅಧ್ಯಕ್ಷರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
2. ಶ್ರೀ ಲಕ್ಷ್ಮಣಗೌಡ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಶ್ರೀಮತಿ ಭಾಗ್ಯ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
4. ಶ್ರೀ ಪುರುಷೋತ್ತಮ, ಸದಸ್ಯರು, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ